ಯಮುನಕ್ಕನಿಗೆ ಕೊನೆಗೂ ಅರ್ಥವಾಗದ ಒಂದು ಸಂಗತಿಯೆಂದರೆ ಈ ಹೆಂಗಸಿಗೆ ತನ್ನ ಮೇಲೆ ಅಷ್ಟು ಸಿಟ್ಟು ಯಾಕೆ ಎನ್ನುವುದೇ ಆಗಿತ್ತು. ತನ್ನ ಮನೆಗೆ ನೂರಡಿ ದೂರದಲ್ಲಿದ್ದ ಮುಳಿಹುಲ್ಲಿನ ಮನೆಯಲ್ಲಿ ವಾಸಿಸುತ್ತಿದ್ದ ಬೊಮ್ಮಿ ಬಾಲ್ಯದಲ್ಲಿ ತನಗೆ ಗೆಳತಿಯಂತೆಯೇ ಇದ್ದವಳು. ತಾನು ಕಟಪಾಡಿಗೆ ಮದುವೆಯಾಗಿ ಹೋದರೆ ಅವಳು ಉಳಿಪಾಡಿಯ ಒಂದು ಮನೆಗೆ ಸೊಸೆಯಾಗಿ ಹೋದಳು. ಅವಳದು ಅಳಿಯ ಸಂತಾನ ಪದ್ಧತಿಯ ಕುಟುಂಬವಾದ ಕಾರಣ ಇದೇ ಮನೆಯಲ್ಲಿ ಉಳಿದಳು. ಅವಳ ಗಂಡ ಮದುವೆಯಾದ ಮೊದಲ ಒಂದೆರಡು ವರ್ಷ ಇಲ್ಲಿಗೆ ಒಂದೆರಡು ಬಾರಿ ಬಂದುಹೋಗಿರಬಹುದು, ಅಷ್ಟೆ. ಆಮೇಲೆ ಅವನನ್ನು ಕಂಡವರಿಲ್ಲ. ಇವಳು ಕೂಡಾ ಗಂಡನ ಮನೆಗೆ ಹೋಗುತ್ತಿದ್ದದ್ದು ಯಾರಿಗೂ ಗೊತ್ತಿಲ್ಲ. ತನ್ನಂತೆ ಬೊಮ್ಮಿಗೂ ಮಕ್ಕಳಿಲ್ಲ. ಮೂರನೆಯ ಮನೆಯ ಪದ್ಮಳಿಗೂ ಮಕ್ಕಳಿಲ್ಲ, ಪಾಪ. ಈಗಾಗಲೇ ಅವಳಿಗೆ ವಯಸ್ಸು ನಲವತ್ತರ ಹತ್ತಿರವಾಗುತ್ತಿರಬೇಕು.

ಯಮುನಕ್ಕನ ವಿವಾಹಪೂರ್ವ ಗರ್ಭದ ರಹಸ್ಯ ಅವಳ ಗಂಡನ ಮನೆಯವರಿಗೆ ತಿಳಿದು ಅವಳನ್ನು ತವರಿಗೆ ಕಳುಹಿಸಿಬಿಟ್ಟಿದ್ದರು. ಅಂದಿನಿಂದ ಈ ಮನೆಯೇ ಗತಿ ಅವಳಿಗೆ. ಐವತ್ತು ಐವತ್ತೈದು ವರ್ಷಗಳೇ ಕಳೆದವು. ಇಷ್ಟು ವರ್ಷಗಳಲ್ಲಿಯೂ ತನ್ನ ಬೆನ್ನು ಬಿಡದ ಶನಿಯಂತೆ ಕಾಡುತ್ತಾ ಬಂದವಳು ಬೊಮ್ಮಿ. ಪ್ರಾರಂಭದಲ್ಲಿ ಅವಳಿಗೆ ತನ್ನ ಮೇಲೆ ದ್ವೇಷವೇನೂ ಇದ್ದ ಹಾಗಿರಲಿಲ್ಲ. ಆಗೆಲ್ಲಾ ಪರೋಕ್ಷವಾಗಿ ತನ್ನನ್ನು ಗಂಡ ಬಿಟ್ಟ ಬಗ್ಗೆ ಹೆಸರೆತ್ತದೆ ಗಟ್ಟಿಯಾಗಿ ಟೀಕಿಸುತ್ತಾ ಇರುತ್ತಿದ್ದಳು ಬೊಮ್ಮಿ. ಅವಳು ಒರಟು ಗಯ್ಯಾಳಿ ಹೆಂಗಸು. ಹಾಗಾಗಿ ಅವಳು ತನ್ನ ಬಗ್ಗೆ ಮಾತ್ರವಲ್ಲ, ಎಲ್ಲರ ಬಗ್ಗೆಯೂ ಹಾಗೆಯೇ ಟೀಕಿಸುತ್ತಾ ಇರುತ್ತಿದ್ದಳೆಂದು ಯಮುನಕ್ಕ ಮೊದಲು ಮುಜುಗರ ಪಡುತ್ತಾ, ಅವಳ ಬಳಿಯೇ, 'ಸ್ವಲ್ಪ ಮೆತ್ತಗೆ ಮಾತಾಡು ಬೊಮ್ಮಿ' ಎಂದು ಗೋಗರೆದದ್ದೂ ಇದೆ. ಆದರೆ ಇದರಿಂದ ಮತ್ತಷ್ಟು ರೊಚ್ಚಿಗೆದ್ದಂತೆ ಕಂಡ ಬೊಮ್ಮಿ ಹೆಚ್ಚು ಹೆಚ್ಚು ಗದ್ದಲವೆಬ್ಬಿಸತೊಡಗಿದಾಗ ಅವಳ ಜತೆಗೆ ಮಾತನಾಡುವುದನ್ನು ಬಿಟ್ಟಿದ್ದಳು ಯಮುನಕ್ಕ.

ವರ್ಷಗಳು ಉರುಳಿದಂತೆ ಬೊಮ್ಮಿ ಹೆಚ್ಚು ಹೆಚ್ಚು ಒರಟಳೂ ಗಯ್ಯಾಳಿಯೂ ವ್ಯಗ್ರಳೂ ಆಗುತ್ತಾ ಹೋದಳು. ಅವಳ ಮನಸ್ಸಿನೊಳಗಿನ ಲಾವಾರಸ ಯಮುನಕ್ಕನ ಮೇಲೆ ಉಕ್ಕಿ ಹರಿಯತೊಡಗಿತು. ಆಗಲೂ ತಿಂಗಳಿಗೊಮ್ಮೆ, ಎರಡು ಸಲ ಹೀಗೆ ವಾಗ್ದಾಳಿ ನಡೆಸಿ ತೃಪ್ತಿಯಿಂದ ನಕ್ಕು ತನ್ನ ಮನೆಯತ್ತ ಹೋಗುತ್ತಿದ್ದ ಬೊಮ್ಮಿ ಈ ರೋಗ ತೀವ್ರವಾದಂತೆ ಹೆಚ್ಚು ಹೆಚ್ಚು ಸಲ ವ್ಯಗ್ರಳಾಗಿ ಯಮುನಕ್ಕನ ಮನೆಯತ್ತ ಓಡಿಬರತೊಡಗಿದಳು. ಆದರೆ ಪದ್ಮಳ ಮನೆಯಲ್ಲಿ ನಾರ್ಮಲ್ ಆಗಿ ಇರುತ್ತಿದ್ದುದರಿಂದ ಅವಳಿಗೆ ಮಾನಸಿಕ ತೊಂದರೆ ಇತ್ತೆಂದು ಹೇಳುವಂತಿರಲಿಲ್ಲ.

ಬೊಮ್ಮಿ ತನ್ನ ವೈರಿಯಾಗಿ ಪರಿಣಮಿಸಿದ್ದಕ್ಕೆ ಪಕ್ಕದ ಮನೆಯ ಪದ್ಮಕ್ಕ ಕಾರಣವಾಗಿರಬಹುದೇ ಎನ್ನುವ ಯೋಚನೆಯೂ ಯಮುನಕ್ಕನಿಗೆ ಬರುತ್ತಿದ್ದುದು ಉಂಟು.

ಆದರೆ ಪದ್ಮಕ್ಕ ಹಾಗೆ ಮಾಡಿರಲಾರಳು ಎಂಬ ಯೋಚನೆಯೂ ಅವಳಿಗೆ ಬರುತ್ತದೆ. ಒಮ್ಮೆ ತನಗೆ ಜ್ವರ ಬಂದಿದ್ದಾಗ ನಾಲ್ಕು ದಿನ ಗಂಜಿ ಬೇಯಿಸಿ ಹಾಕಿ ಮದ್ದು ತಂದು ಕೊಟ್ಟ ಪದ್ಮಕ್ಕ, ತಾನು ದಿನ ನಿತ್ಯ ಸಂಜೆ ಟೀವಿ ನೋಡಲು ಹೋದಾಗ ಏನೊಂದೂ ಬೇಸರಿಸದೆ ಕರೆದು ಕೂರಿಸುವ ಪದ್ಮಕ್ಕ. ಒಮ್ಮೊಮ್ಮೆ ಒಂದು ಲೋಟ ಚಾ ಕೊಡುತ್ತಿದ್ದುದೂ ಉಂಟು. ಇಲ್ಲ, ಪದ್ಮಕ್ಕ ಕಾರಣಳಾಗಿರಲಾರಳು.

ಇಂತಹ ಯೋಚನೆಗಳಲ್ಲಿ ಮುಳುಗಿದ ಯಮುನಕ್ಕ ಬೊಮ್ಮಿಯ ಕಡೆಗೆ ಗಮನವನ್ನೇ ಕೊಡದೆ